## ಮಂಗಲ್-ಪೊಂಗಲ್

ಆರು ವರ್ಷದ ಸಾನ್ವಿಯನ್ನು ಕರೆದುಕೊಂಡು ಮನೆಯ ಪಕ್ಕದ ಗಾರ್ಡನ್ನಿಗೆ ಹೋಗಿದ್ದೆ. ಅಲ್ಲಿ ನಮ್ಮ ಯಜಮಾನರ ಸಹೋದ್ಯೋಗಿಯೊಬ್ಬರು ತಮ್ಮ ಮಗಳನ್ನು ಆಟ ಆಡಿಸಲು ಬಂದಿದ್ದರು. ಸಾನ್ವಿಯನ್ನು ನೋಡಿ 'ಯಾರು ಈ ಮಗು?' ಎಂದು ಹಿಂದಿಯಲ್ಲಿ ಕೇಳಿದರು. 'ತಂಗಿಯ ಮಗಳು ಎಂದು ಹೇಳಿದೆ?' 'ನಾಮ್ ಕ್ಯಾ ಹೈ ಬೇಟಾ?' ಎಂದರು. ಅವಳು ತನ್ನ ಹೆಸರು ಹೇಳಿ, ಅವರ ಹೆಸರನ್ನೂ ಕೇಳಿದಳು. ಅವರು, 'ಮೈ ನೇಮ್ ಈಸ್ ಮಂಗಲ್' ಎಂದರು. ಅದಕ್ಕೆ ಸಾನ್ವಿ, 'ಆಪ್ ಮಂಗಲ್ ಹೋ ತೊ, ಪೊಂಗಲ್ ಕೌನ್? ಆಪ್ ಕಾ ಭಾಯಿ?' ಎಂದಳು. ಅವಳ ಹಾಸ್ಯಪ್ರಜ್ಞೆಗೆ ಅಲ್ಲಿದ್ದವರೆಲ್ಲಾ ನಕ್ಕರು.

**ಸುವರ್ಣಾ ಚಿದಾನಂದ**





ಕಲೆ: ಗಣೇಶ ಆಚಾರ್ಯ

## ಶೀತರಾಮ

ಮದುವೆ ಮನೆಯಲ್ಲಿ ಮಕ್ಕಳ ಕಲರವಕ್ಕೆ ಕಡಿವಾಣ ಇರುವುದಿಲ್ಲ. ಎಲ್ಲಾ ದಿನ ಶಾಲಾ ಕೊಠಡಿಗಳಲ್ಲಿ ಸೆರೆಯಾಗಿರುವ ಮಕ್ಕಳು ಬಿಡುಗಡೆಗೊಂಡ ಭಾವದಲ್ಲಿ ಸ್ವಚ್ಛಂದವಾಗಿ ಆಡ್ತಾ ಇದ್ದರು. ನಾನು ಸುಮಾರು ನಾಲ್ಕು ವರ್ಷದ ಮುದ್ದಾದ ಹುಡುಗನನ್ನು ಎಳೆದುಕೊಂಡು ನನ್ನ ತೋಳ ತೆಕ್ಕೆಗೆ ತೆಗೆದುಕೊಂಡು, 'ಏನೋ ನಿನ್ನ ಹೆಸರು?' ಎಂದು ಕೇಳಿದೆ. ಅದಕ್ಕವನು ಬಿಡಿಸಿಕೊಳ್ಳಲು ಪ್ರಯತ್ನಿಸುತ್ತ 'ಶೀತರಾಮ' ಎಂದ. 'ಶೀತರಾಮ! ಅದೆಂಥ ಹೆಸರೊ?' ಎಂದೆ. ಅಷ್ಟರಲ್ಲಿ ಆತನ ತಾಯಿ ಬಂದು, 'ಇವನು ಸ ಅಕ್ಷರ ಬದಲಿಗೆ ಶ ಅಕ್ಷರ ಉಚ್ಚಾರ ಮಾಡ್ತಾನೆ, ಸೀತಾರಾಮ ಅನ್ನೋದನ್ನ ಶೀತರಾಮ ಎಂದು ಹೇಳ್ತಾನೆ' ಅಂತ ಸಮಜಾಯಿಸಿ ನೀಡಿದರು.

**ಮಲ್ಲಿಕಾರ್ಜುನ ಸುರಧೇನುಪುರ**